ವರದಿಯನ್ನು ಒಪ್ಪಿಸುವುದು

ಶ್ರೀ ವೈಜನಾಥ್ ಪಾಟೀಲ್ (ಅಧ್ಯಕ್ಷರು : ಅಂದಾಜು ಸಮಿತಿ) : ಮಾನ್ಯ ಅಧ್ಯಕ್ಷರೆ, ಅಂದಾಜು ಸಮಿತಿಯ ಕೃಷ್ಣಮೇಲ್ದಂಡೆ ಯೋಜನೆಯ ನಾಲ್ಕನೇ ವರದಿಯನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಯನ್ನು ಮಂಡಿಸಲಾಯಿತು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಬೇಡಿಕೆಯ ಸಂಖ್ಯೆ 8 ರೇಷ್ಮೆಯ ಬಗ್ಗೆ, ಬೇಡಿಕೆಯ ಸಂಖ್ಯೆ 9 ಸಕ್ಕರೆಯ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ, ಅದರ ಜೊತೆಗೆ ಕಬ್ಬಿನ ಬಗ್ಗೆ ಸಹ ಚರ್ಚೆಗೆ ತೆಗೆದುಕೊಂಡಿದ್ದರೆ ಒಳ್ಳೆಯದಿತ್ತು.

ಅಧ್ಯಕ್ಷರು : ಕಬ್ಬು ಸಪರೇಟ್ ಆಗಿ ಬರುವುದಿಲ್ಲ. ಕಬ್ಬು ಕೃಷಿ ಇಲಾಖೆಯಲ್ಲೇ ಬಂದುಬಿಡುತ್ತದೆ.

ಮಾನ್ಯ ರಾಜಣ್ಣನವರೇ ತಾವು ಚರ್ಚೆಯನ್ನು ಪ್ರಾರಂಭ ಮಾಡಿ. ಮಾನ್ಯ ಪುಟ್ಟಣ್ಣಯ್ಯನವರೇ, ತಾವು ಇಂದೇ ಮುಗಿಸಿಬಿಡಬೇಕು. ಏಕೆಂದರೆ ಅನಂತರ ಬೇಡಿಕೆಯನ್ನು ಮತಕ್ಕೆ ಹಾಕಿಬಿಡುತ್ತೇವೆ. ಬಹಳ ಬೇಡಿಕೆಗಳಿದೆ. ಅವುಗಳನ್ನೆಲ್ಲ ಮುಗಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ತಾವು ಹೇಗೆ ತೀರ್ಮಾನ ತೆಗೆದುಕೊಳ್ಳುತ್ತೀರೋ ಅದಕ್ಕೆ ನಾವು ಬದ್ಧರಾಗಿರುತ್ತೇವೆ. ಓಟಿಂಗ್ ಮಾಡುವುದಕ್ಕೆ ಅವರು ತಯಾರಾಗಿದ್ದಾರೆಂದರೆ ಅದನ್ನೇ ಮಾಡೋಣ. ಆದರೆ ಅವರು ಅದಕ್ಕೆ ತಯಾರಾಗಿದ್ದಾರೆಯೇ?

ಅಧ್ಯಕ್ಷರು : ಓಟಿಂಗ್‌ಗೆ ನೀವೂ ಅವರು ತಯಾರಾಗಿರಬಹುದು, ಆದರೆ ನಮಗೆ ಚರ್ಚೆ ಬೇಕಾಗಿದೆ. ಮಹಿಳಾ ಸದಸ್ಯರುಗಳು ಚರ್ಚೆಯಾಗಲೇ ಬೇಕು, ಸಭೆಯು ಹತ್ತು ಗಂಟೆಯವರೆಗೆ ಬೇಕಾದರೂ ನಡೆಯಲಿ ಎಂದು ಗಲಾಟೆ ಮಾಡುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು 6ನೇ ತಾರೀಖು ಸಮಾವೇಶಗೊಂಡು ಬೆಳಿಗ್ಗೆ ಒಂದು ಗಂಟೆಯ ಕಾಲ ಪ್ರಶ್ನೋತ್ತರ ಆದಮೇಲೆ ಇದೇ ವಿಚಾರದ ಮೇಲೆ ಚರ್ಚೆ ಮಾಡೋಣ. ಈಗ ಇದರ ಬಗ್ಗೆ ಚರ್ಚೆ ಪ್ರಾರಂಭ ಮಾಡಿ ಎಷ್ಟು ಆಗುತ್ತದೋ ಅಷ್ಟನ್ನು ಮಾಡೋಣ.

ಅಧ್ಯಕ್ಷರು : ಆಗಬಹುದು. ಮಾನ್ಯ ರಾಜಣ್ಣನವರೆ, ಈಗ ತಾವು ಚರ್ಚೆ ಪ್ರಾರಂಭ ಮಾಡಿ.

ವಿತ್ತೀಯ ಕಾರ್ಯಕಲಾಪ.

1998-99ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದು)

ಶ್ರೀ ಎನ್. ರಾಜಣ್ಣ : ಸನ್ಮಾನ್ಯ ಅಧ್ಯಕ್ಷರೇ, I am a farmer,

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ನಾವೆಲ್ಲಾ ಮಣ್ಣಿನ ಮಕ್ಕಳು, ನಮ್ಮ ರಾಜಣ್ಣನವರು ಸಗಣಿಯ ಮಕ್ಕಳು. ಏಕೆಂದರೆ ಅವರು ಹೈನುಗಾರಿಕೆಯಲ್ಲಿ ಬಹಳ ಆಸಕ್ತಿ ಇರತಕ್ಕಂಥವರು.